17.	Coorg	03	03
18.	South Canara	03	10
19.	Mandya	03	09
20.	Chickmagalur	03	07

ಹಾಪ್‌ಕಾಮ್ಸ್‌ನಲ್ಲಿರುವ ಸಿಬ್ಬಂದಿಯ ಸಂಖ್ಯೆ

73 - ಶ್ರೀ ಕೆ.ಎನ್. ನಾಗೇಗೌಡ (ಕಿರುಗಾವಲು) : ಮಾನ್ಯ ತೋಟಗಾರಿಕೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಹಾಪ್‌ಕಾಮ್ಸ್‌ನಲ್ಲಿ ಕಾರ್ಯನಿರ್ವಹಿಸುತ್ತಿರುವ ಉದ್ಯೋಗಸ್ಥರ ಸಂಖ್ಯೆ ಎಷ್ಟು?

ಆ) ರಾಜ್ಯದಲ್ಲಿ ಹಾಪ್‌ಕಾಮ್ಸ್ ವಹಿವಾಟು ಎಷ್ಟು?

ಇ) ರೈತರಿಗೆ ಯಾವ ರೀತಿ ಸಹಾಯವಾಗಿದೆ?

ಶ್ರೀ ಡಿ.ಟಿ. ಜಯಕುಮಾರ್ (ತೋಟಗಾರಿಕೆ ರಾಜ್ಯ ಸಚಿವರು) :

ಅ) ಉದ್ಯೋಗಸ್ಥರ ಸಂಖ್ಯೆ :1578

ಆ) 31.54 ಕೋಟಿ ರೂ.ಗಳು (1994-95ರ ವಹಿವಾಟಿನ ಪ್ರಕಾರ)

ಇ) ಹಣ್ಣು ತರಕಾರಿಗಳನ್ನು ನೇರವಾಗಿ ರೈತರಿಂದ ಸಂಘವು ಪಡೆಯುತ್ತಿದೆ.

ರೈತರಿಗೆ ಲಾಭದಾಯಕವಾದ ಬೆಲೆಯನ್ನು ನೀಡುತ್ತಿದೆ.

ರೈತರಿಗೆ ಬೀಜ, ಗೊಬ್ಬರ, ಸಸ್ಯ ಸಂರಕ್ಷಣಾ ಔಷಧಿಗಳು, ತೋಟಗಾರಿಕೆ ಸಲಕರಣೆಗಳನ್ನು ಒದಗಿಸಲು 11 ಮಾರಾಟ ಮಳಿಗೆಗಳನ್ನು ತೆರೆದಿದೆ.

11 ಸಂಗ್ರಹಣಾ ಕೇಂದ್ರಗಳನ್ನು ತೆರೆದಿದ್ದು, ಅವುಗಳ ಸುತ್ತಮುತ್ತಲಿನ ರೈತರಿಂದ ಹಣ್ಣು, ತರಕಾರಿಗಳನ್ನು ಸಂಗ್ರಹಿಸಲಾಗುತ್ತಿದೆ ಹಾಗೂ ಸ್ಥಳದಲ್ಲಿ ಹಣ ಪಾವತಿ ಮಾಡಿ ರೈತರ ಹಣ್ಣು, ತರಕಾರಿಗಳ ಸಾಗಾಣಿಕೆ ತೊಂದರೆ ಹಾಗೂ ಮಾಲು ನಷ್ಟವನ್ನು ಕಡಿಮೆ ಗೊಳಿಸುತ್ತಿದೆ.

ರೈತರಿಗೆ ಇತರೇ ರಾಜ್ಯಗಳಲ್ಲಿ ಅಧ್ಯಯನ ಪ್ರವಾಸವನ್ನು ಏರ್ಪಡಿಸಲಾಗುತ್ತಿದೆ.

ರೈತರಿಗೆ ತಂಗಲು ರೈತ ಭವನದ ನಿರ್ಮಾಣ ಕೆಲಸವು ಮುಂದುವರಿಯುತ್ತಿದೆ. ಸಂಘವು ಮೇಲ್ಕಂಡ ಎಲ್ಲಾ ಅನೂಕೂಲಗಳನ್ನು ರೈತರಿಗೆ ಮಾಡುತ್ತಿದೆ.

ರಾಜ್ಯದಲ್ಲಿರುವ ಗೃಹ ನಿರ್ಮಾಣ ಸಂಘಗಳ ಬಗ್ಗೆ

74 - ಶ್ರೀ ಕೆ.ಎನ್. ನಾಗೇಗೌಡ (ಕಿರುಗಾವಲು) : ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿರುವ ಗೃಹ ನಿರ್ಮಾಣ ಸಹಕಾರ ಸಂಘಗಳ ಒಟ್ಟು ಸಂಖ್ಯೆ ಎಷ್ಟು?

ಆ) ಜಿ.ವಿ.ಕೆ. ರಾವ್ ವರದಿ ಜಾರಿಗೆ ಬಂದಿದೆಯೇ?

ಇ) ಗೃಹ ನಿರ್ಮಾಣ ಸಹಕಾರ ಸಂಘಗಳ ಅವ್ಯವಹಾರಗಳ ಬಗ್ಗೆ ತೆಗೆದುಕೊಂಡಿರುವ ಕ್ರಮಗಳೇನು?

ಶ್ರೀ ಎಸ್.ಎಸ್. ಪಾಟೀಲ್ (ಸಹಕಾರ ಸಚಿವರು) :

ಅ) 1,606

ಆ) ಕರ್ನಾಟಕ ಸಹಕಾರ ಸಂಘಗಳ ಕಾಯಿದೆ 1959ರ ಕಲಂ 64.ರಡಿಯಲ್ಲಿ ಬೆಂಗಳೂರು ನಗರದಲ್ಲಿರುವ 98 ಗೃಹ ನಿರ್ಮಾಣ ಸಹಕಾರ ಸಂಘಗಳ ವ್ಯವಹಾರದ ಬಗ್ಗೆ ವಿಚಾರಣೆ ಮಾಡಲು ಶ್ರೀ ಜಿ.ವಿ.ಕೆ. ರಾವ್, ಹಿಂದಿನ ನಿಯಂತ್ರಕರು, ತೂಕ ಮತ್ತು ಅಳತೆ, ಬೆಂಗಳೂರು, ಇವರಿಗೆ ಮಹಿಸಲಾಗಿದ್ದು 90 ಗೃಹ ನಿರ್ಮಾಣ ಸಹಕಾರ ಸಂಘಗಳಿಗೆ ಸಂಬಂಧಿಸಿದಂತೆ ವಿಚರಣಾ ವರದಿ ಸಲ್ಲಿಸಿದ್ದಾರೆ. ಈ ವರದಿಯನ್ನು ಅನುಸರಿಸಿ ಕ್ರಮ ತೆಗೆದುಕೊಳ್ಳಲಾಗಿದೆ.

ಇ) ಅವ್ಯವಹಾರಗಳು ಕಂಡು ಬಂದ ಗೃಹ ನಿರ್ಮಾಣ ಸಹಕಾರ ಸಂಘಗಳ ಮೇಲೆ ಕರ್ನಾಟಕ ಸಹಕಾರ ಸಂಘಗಳ ಕಾಯಿದೆ 1959 ಮತ್ತು ನಿಯಮಗಳಡಿಯಲ್ಲಿ ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ತಾಳಿಎಣ್ಣೆ ಘಟಕಗಳು

1914 - ಶ್ರೀ ಕೆ.ಎನ್. ನಾಗೇಗೌಡ (ಕಿರುಗಾವಲು) : ಮಾನ್ಯ ತೋಟಗಾರಿಕೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) *ರಾಜ್ಯದಲ್ಲಿ ಮಂಜೂರು ಮಾಡಲಾದ ತಾಳಿಎಣ್ಣೆ ಘಟಕಗಳೆಷ್ಟು? (ಸಂಸ್ಥೆಗಳ ದಿನಾಂಕವನ್ನು ತಿಳಿಸುವುದು.)*

ಆ) *ಮಂಡ್ಯದ ಎನ್.ಡಿ.ಡಿಬಿ.ಯವರಿಗೆ ಯಾವಾಗ ಮಂಜೂರು ಮಾಡಲಾಗಿದೆ? ಹಾಗೂ ಯಾವ ಹಂತದಲ್ಲಿದೆ?*

ಶ್ರೀ ಡಿ.ಟಿ. ಜಯಕುಮಾರ್ (ತೋಟಗಾರಿಕೆ ರಾಜ್ಯ ಸಚಿವರು) :

ಅ) ಸರ್ಕಾರಿ ಆಜ್ಞೆ ಸಂಖ್ಯೆ : ಎಹೆಚ್‌ಡಿ 16 ಹೆಚ್‌ಪಿಪಿ 92 ದಿನಾಂಕ : 4-6-93 ರಂತೆ ರಾಜ್ಯದಲ್ಲಿ ಕೆಳಕಂಡ ಎಂಟು ಸಂಸ್ಥೆಗಳಿಗೆ ತಾಳಿಎಣ್ಣೆ ಘಟಕಗಳನ್ನು ಮಂಜೂರು ಮಾಡಲಾಗಿತ್ತು.

1)	ಮೆ: ಎಸ್.ಅಂಡ್ ಎಸ್ ಎಂಟರ್ ಪ್ರೈಸಸ್	:	ಘಟಪ್ರಭಾ ಮತ್ತು ಮಲಪ್ರಭ ಪ್ರದೇಶ
2)	ಮೆ: ಲಕ್ಷ್ಮಿ ಮೆಷಿನ್ ವರ್ಕ್ಸ್ ಲಿ.	:	ಭದ್ರ ಅಚ್ಚುಕಟ್ಟು ಪ್ರದೇಶ 2ನೇ ವಿಭಾಗ
3)	ಮೆ: ಕರ್ನಾಟಕ ಓಸ್ವಾಲ್ ಆಯಿಲ್ ಪಾಮ್ಸ್ ಲಿ.	:	ಭದ್ರಾ ಅಚ್ಚುಕಟ್ಟು ಪ್ರದೇಶದ ಮೊದಲನೇ ವಿಭಾಗ.
4)	ಮೆ: ಐ.ಟಿ.ಸಿ. ಆಗ್ರೋ ಸಂಸ್ಥೆ	:	ಮೈಸೂರು ಬಿಳ್ಳಿ ಹಾಗೂ ಹಾಸನ ಬಿಳ್ಳಿಯ ಹೊಳೆನರಸೀಪುರ ಮತ್ತು ಅರಕಲಗೂಡು (ತಾಲ್ಲೂಕು)
5)	ರಾಷ್ಟ್ರೀಯ ಹೈನು ಅಭಿವೃದ್ಧಿ ನಿಗಮ (ಎನ್.ಡಿ.ಡಿ.ಬಿ)	:	ಮಂಡ್ಯ ಜಿಲ್ಲೆ
6)	ಮೆ: ಡಂಕನ್ಸ್ ಯೋಟಿಕ್ ಲಿ	:	ಬಳ್ಳಾರಿ ಜಿಲ್ಲೆ
7)	ಮೆ: ಹೆಚ್.ಆರ್.ಬಿ. ಅಸೋಸಿಯೇಟ್ಸ್	:	ರಾಯಚೂರು ಜಿಲ್ಲೆಯ ರಾಯಚೂರು ಮತ್ತು ಮಾನ್ವಿ ತಾಲ್ಲೂಕುಗಳು
8)	ಮೆ: ವಿಮ್ಕೋ ಲಿಮಿಟೆಡ್	:	ರಾಯಚೂರು ಜಿಲ್ಲೆಯ ಗಂಗಾವತಿ ವಿಭಾಗ

ಆ) ಮಂಡ್ಯ ಜಿಲ್ಲೆಯಲ್ಲಿ ತಾಳಿಬೆಳೆ ವಿಸ್ತೀರ್ಣ ಕೈಗೊಂಡ ಸಂಸ್ಕರಣಾ ಘಟಕ ಸ್ಥಾಪಿಸಲು ದಿನಾಂಕ: 4-8-93 ರಂದು ಸರ್ಕಾರದ ಆದೇಶ ಹೊರಡಿಸಲಾಗಿದೆ. ಈ ಸಂಸ್ಥೆಯು ಇದುವರೆವಿಗೂ ಬೆಳೆ ವಿಸ್ತೀರ್ಣವನ್ನು 25 ಎಕರೆ ಪ್ರದೇಶದಲ್ಲಿ ಮಾತ್ರ